2017 ಕ.ತೀ.ವ. 946

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ

## ಕೆ.ಎಂ. ಪ್ರಕಾಶ್ ಮತ್ತು ಇತರರು –ವಿರುದ್ಧ– ಕರ್ನಾಟಕ ಸರ್ಕಾರ (ಸಾಲಿಗ್ರಾಮ ಪೋಲಿಸರ ಮೂಲಕ) *

ದಂಡ ಪ್ರಕ್ರಿಯಾ ಸಂಹಿತೆ ಕಲಂ 374 ರಡಿಯಲ್ಲಿ ಕ್ರಿಮಿನಲ್ ಮೇಲ್ಮನವಿ.

ಭಾರತೀಯ ದಂಡ ಸಂಹಿತೆ, 1860 – ಕಲಂ 498–ಎ ಮತ್ತು 304–ಬಿ

ವರದಕ್ಷಿಣೆ ನಿಷೇಧ ಕಾಯಿದೆ ಕಲಂ 3 ಮತ್ತು 6.

ಭಾರತೀಯ ದಂಡ ಸಂಹಿತೆ ಕಲಂ 498–ಎ, 304–ಬಿ ಮತ್ತು ವರದಕ್ಷಿಣೆ ನಿಷೇಧ ಕಾಯಿದೆ ಕಲಂ 3 ಮತ್ತು 6 ರಡಿಯಲ್ಲಿ ಮೇಲ್ಮನವಿದಾರರು ಶಿಕ್ಷಾರ್ಹ ಅಪರಾಧವನ್ನೆಸಗಿರುವನೆಂದು ಶಿಕ್ಷಿಸಿ ಆದೇಶಿಸಿದ ಸತ್ರ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಮೇಲ್ಮನವಿ.

ಕಿರುಕುಳದಿಂದ ಸೀಮೆಎಣ್ಣೆಯನ್ನು ಮೈಮೇಲೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಸತ್ತವಳು ನೀಡಿದ ಮರಣ ಕಾಲೀನ ಹೇಳಿಕೆ ನಿಷ್ಕಳಂಕವಾದದ್ದು ಗಾಯದ ದೃಢೀಕರಣ ಪತ್ರ ಮತ್ತು ಮರಣ ಕಾಲೀನ ಹೇಳಿಕೆಗಳಿಂದ ಮಾನಸಿಕ ಕಿರುಕುಳ, ಚಿತ್ರಹಿಂಸೆ ಮತ್ತು ಮೌಖಿಕ ಬಯ್ಗುಳದಿಂದ ಮೃತಳು ತಾನು ಸೀಮೆಎಣ್ಣೆ ಸುರಿದು, ಬೆಂಕಿ ಹಚ್ಚಿಕೊಂಡು ಸತ್ತಿರುವುದು ಸಾಬೀತಾಗಿದೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಶಿಕ್ಷೆಯ ಪ್ರಮಾಣವನ್ನು ಇಳಿಸಿ ಸದರಿ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ.

* ಕ್ರಿಮಿನಲ್ ಅಪೀಲು ಸಂಖ್ಯೆ: 1156/2005, ದಿನಾಂಕ: 16ನೇ ಡಿಸೆಂಬರ್, 2016.

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

*1. ಎಐಆರ್ 1988 ಎಸ್‌ಸಿ 1850*
*ಉಕಾ ರಾಮ್ -ವಿರುದ್ಧ- ರಾಜಸ್ತಾನ್ ಸರ್ಕಾರ (ಉಲ್ಲೇ) 4*
*2. ಎಐಆರ್ 1958 ಎಸ್‌ಸಿ 22*
*ಕುಶಾಲ್ ರಾವ್ -ವಿರುದ್ಧ- ಬಾಂಬೆ ಸರ್ಕಾರ (ಉಲ್ಲೇ) 5*
*3. (2013) 14 ಎಸ್‌ಸಿಸಿ 159*
*ಮಧ್ಯಪ್ರದೇಶ ಸರ್ಕಾರ -ವಿರುದ್ಧ- ದಾಲ್ ಸಿಂಗ್ (ಉಲ್ಲೇ) 5*
*4. ಎಐಆರ್ 1993 ಎಸ್‌ಸಿ 374*
*ಶ್ರೀಮತಿ ಕಮಲ -ವಿರುದ್ಧ- ಪಂಜಾಬ್ ಸರ್ಕಾರ (ಉಲ್ಲೇ) 5*
*5. (2014) 4 ಎಸ್‌ಸಿಸಿ 129*
*ಸುರೀಂದರ್ ಸಿಂಗ್ -ವಿರುದ್ಧ- ಹರಿಯಾಣ ಸರ್ಕಾರ (ಉಲ್ಲೇ) 5*
*6. (1976) 1 ಎಸ್‌ಸಿಸಿ 20*
*ಭಾಗೀರಥಿ -ವಿರುದ್ಧ- ಮಧ್ಯಪ್ರದೇಶ ಸರ್ಕಾರ (ಉಲ್ಲೇ) 6*

ಅರ್ಜಿದಾರರ ಪರ : ಶ್ರೀ ಎಂ.ಎಸ್. ರಾಜೇಂದ್ರ ಪ್ರಸಾದ್, ಹಿರಿಯ ವಕೀಲರ ಪರವಾಗಿ ಶ್ರೀಮತಿ ನವ್ಯ ಎಲ್., ವಕೀಲರು
ಪ್ರತ್ಯರ್ಜಿದಾರರ ಪರ: ಶ್ರೀ ಕೆ.ಆರ್. ಕೇಶವ್ ಮೂರ್ತಿ, ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್–II

## ತೀರ್ಪು

**ನ್ಯಾಯಮೂರ್ತಿ ಆನಂದ್ ಬೈರಾರೆಡ್ಡಿ:**

ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳ ಹಾಗೂ ಮಾನ್ಯ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್‌ರವರ ವಾದವನ್ನು ಆಲಿಸಿರುತ್ತೇನೆ.

2. ಪ್ರಾಸಿಕ್ಯೂಷನ್ ವಾಸ್ತವಾಂಶಗಳನ್ನು ಬಹಿರಂಗಪಡಿಸಿದ್ದು, ಅವು ಈ ಮುಂದಿನಂತಿವೆ:

ವಿಶಾಲಾಕ್ಷಿ (ಮೃತ ವ್ಯಕ್ತಿ) ಆಪಾದಿತ ಸಂಖ್ಯೆ 1, ಪ್ರಕಾಶ್ ಈತನನ್ನು ಘಟನೆ ನಡೆಯುವ ಹತ್ತು ತಿಂಗಳು ಮೊದಲು ವಿವಾಹವಾಗಿರುತ್ತಾಳೆ. ಮೃತಳಿಗೆ ಆಪಾದಿತ ಸಂಖ್ಯೆ. 2 ಮಾವ, ಆಪಾದಿತ ಸಂಖ್ಯೆ. 3 ಅತ್ತೆ ಹಾಗೂ ಆಪಾದಿತ ಸಂಖ್ಯೆ. 4 ಮೈದುನರುಗಳಾಗಿರುತ್ತಾರೆ. ಪ್ರಾ.ಸಾ. 10 ಹಾಗೂ ಪ್ರಾ.ಸಾ.15 ರವರುಗಳು ಆಪಾದಿತ ಸಂಖ್ಯೆ 1 ಈತನೊಂದಿಗೆ ವಿಶಾಲಾಕ್ಷಿಯ ವಿವಾಹವನ್ನು ಮಾಡುವ ಪ್ರಸ್ತಾವನೆಯನ್ನು ಮಾಡಿರುತ್ತಾರೆ. ವಿವಾಹಕ್ಕೆ ಒಂದು ತಿಂಗಳು ಮೊದಲು ಪ್ರಾ.ಸಾ.10, ಪ್ರಾ.ಸಾ. 14 ಹಾಗೂ ಪ್ರಾ.ಸಾ. 15 ರವರುಗಳು, ಆಪಾದಿತ ಸಂ.1 ಈತನನ್ನು, ಈತನ ಕುಟುಂಬದವರೊಂದಿಗೆ ಭೇಟಿಯಾಗಿರುತ್ತಾರೆ. ಆಗ ಪ್ರಕಾಶ್‌ನ ಕುಟುಂಬದವರು, 2 ಲಕ್ಷ ನಗದು, ಒಂದು ಮೋಟಾರು ಸೈಕಲ್, ಚಿನ್ನದುಂಗುರ, ಚಿನ್ನದ ಸರ ಹಾಗೂ ಮದುವೆ ಬಟ್ಟೆಗಳೊಂದಿಗೆ ಹಾಗೂ ಹೆಣ್ಣಿಗೆ 200ಗ್ರಾಂ ಚಿನ್ನವನ್ನು ವರದಕ್ಷಿಣೆ ರೂಪದಲ್ಲಿ ಕೇಳಿರುತ್ತಾರೆ. ಕೊನೆಗೆ 50,000/– ನಗದು, ಒಂದು ಬೈಕು ಹಾಗೂ 175 ಗ್ರಾಂ ಚಿನ್ನವನ್ನು ನೀಡುವಂತೆ ಮಾತುಕತೆಯಾಗಿ, ಅದನ್ನು ನಿಶ್ಚಿತಾರ್ಥದ ದಿನ ನೀಡಲು ಒಪ್ಪಿಕೊಂಡಿರುತ್ತಾರೆ. ವಿವಾಹದ ತರುವಾಯ ಮೃತಳು ತನ್ನ ಪತಿ, ಅತ್ತೆ ಹಾಗೂ ಮಾವನವರುಗಳೊಂದಿಗೆ ವಾಸಿಸುತ್ತಿರುತ್ತಾಳೆ. ಆಕೆಯ ಪಾಲಿಗೆ ಮದುವೆಯ ಸಂತಸದ ದಿನಗಳು ಕೇವಲ 3 ರಿಂದ 4 ತಿಂಗಳುಗಳಷ್ಟು ಅಲ್ಪಾಯುವಾಗಿದ್ದವೆಂದು ಹೇಳಲಾಗಿರುತ್ತದೆ.

ಮೃತಳನ್ನು, ಆಕೆ ಹೆಚ್ಚು ವರದಕ್ಷಿಣೆ ತರಲಿಲ್ಲವೆಂದು ಹೀಗಳಿಸಿ ಆಕೆಯನ್ನು ಸರಿಯಾಗಿ ನಡೆಸಿಕೊಳ್ಳದೆ, ಆಕೆಯ ಅತ್ತೆ, ಮಾವ ಹಾಗೂ ಮೈದುನರವರುಗಳು ಕ್ರೂರವಾಗಿ ಹಿಂಸಿಸಿ, ಮಾನಸಿಕ ಕಿರುಕುಳ ಕೊಡುತ್ತಿದ್ದರು. ಆದಾಗ್ಯೂ, ಆಕೆಯ ಪತಿ ಚೆನ್ನಾಗಿ ನೋಡಿಕೊಳ್ಳುತ್ತಾ ತಾವು ಬೇರೆ ಮನೆ ಮಾಡೋಣ ಎಂದು ಹೇಳಿದ್ದನು. ಗಂಡ–ಹೆಂಡತಿ ವಿಶೇಷ ಸಂದರ್ಭಗಳಲ್ಲಿ ಆಕೆಯ ತಾಯಿಯ ಮನೆಗೆ ಬಂದು, ಸ್ವಲ್ಪ ದಿನ ಕಳೆಯುತ್ತಿದ್ದಳು. ಇದೂ ಕೂಡ ಸ್ವಲ್ಪ ದಿನಗಳ ಮಟ್ಟಿಗೆ ಮಾತ್ರವಾಗಿತ್ತು. ಈ ಮಧ್ಯೆ, ಮೃತಳಿಗೆ ಗರ್ಭಪಾತವಾಗುತ್ತದೆ. ಆಗ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಿದ ದಿನ ಮೃತಳ ಕುಟುಂಬದವರಿಗೆ ವಿಷಯವನ್ನು ತಿಳಿಸುತ್ತಾರೆ. ಆಗ ಬೇಸರಗೊಂಡ ಮೃತಳ ಕುಟುಂಬದವರು, ನಮಗು–ನಿಮಗು ಯಾವುದೇ

ಸಂಬಂಧವಿಲ್ಲ, ನಮಗೆ ಇನ್ನೂ ಮುಂದೆ ಫೋನ್ ಮಾಡ್ಬೇಡಿ ಎಂದು ಆಪಾದಿತರ ಮನೆಯವರಿಗೆ ಹೇಳಿರುತ್ತಾರೆ.

ಮದುವೆಯಾಗಿ ಹತ್ತು ತಿಂಗಳು ಕಳೆದ ನಂತರ, ಅತ್ತೆಯ ಬೈಯ್ಗುಳ ಹಾಗೂ ಆಕೆ ಕೊಡುತ್ತಿದ್ದ ಮಾನಸಿಕ ಹಿಂಸೆಯನ್ನು ತಡೆದುಕೊಳ್ಳಲಾಗದೆ, ಬೆಳಿಗ್ಗೆ ಸುಮಾರು 11 ಗಂಟೆ ಸಮಯದಲ್ಲಿ ಮೃತಳು ತನ್ನ ಮೇಲೆ ತಾನೇ ಸೀಮೆಎಣ್ಣೆ ಸುರಿದುಕೊಂಡು ಬೆಂಕಿಹಚ್ಚಿಕೊಂಡಿರುತ್ತಾಳೆ. ಆ ಸಮಯದಲ್ಲಿ ಮೃತಳ ಅತ್ತೆ, ಮಾವ, ಮೈದುನ ಹಾಗೂ ಗಂಡ ಎಲ್ಲರೂ ಮನೆಯಲ್ಲಿದ್ದರು. ಮೃತಳ ಕಿರುಚಾಟ ಕೇಳಿಸಿಕೊಂಡು, ಪ್ರಕಾಶ್ ಧಾವಿಸಿಬಂದು ಬೆಂಕಿ ನಂದಿಸಲು ಒಂದು ಬ್ಲಾಂಕೆಟ್ ಅನ್ನು ಆಕೆಗೆ ಸುತ್ತಿ, ಆಕೆಯನ್ನು ರಕ್ಷಿಸಿರುತ್ತಾನೆ. ತರುವಾಯ ಆಕೆಯನ್ನು ಕೆ.ಆರ್. ನಗರ ಆಸ್ಪತ್ರೆಗೆ ಕರೆದೊಯ್ದು, ಅಲ್ಲಿ ಮೊದಲ ಹಾಗೂ ಎರಡನೇ ಹಂತದಲ್ಲಿರುವ ಸುಟ್ಟಗಾಯಗಳಿಗೆ ಚಿಕಿತ್ಸೆ ಪಡೆದು, ತರುವಾಯ ಮೈಸೂರಿನ ಬಿ.ಎಂ. ಆಸ್ಪತ್ರೆಗೆ ಆಕೆಯನ್ನು ಸ್ಥಳಾಂತರಿಸಿರುತ್ತಾರೆ.

ಆಸ್ಪತ್ರೆಗೆ ದಾಖಲಾದ ಮೊದಲನೇ ದಿನ (ಅಂದರೆ 1.4.99) ಪೊಲೀಸರು 2.45 ಹಾಗೂ 3.15ರ ನಡುವೆ ಮೌಖಿಕ ದೂರನ್ನು, ದಾಖಲಿಸಿಕೊಂಡಿದ್ದು ಅದು ನಿಶಾನೆ.36 ಎಂದಾಗಿರುತ್ತದೆ. ತರುವಾಯ, ಭಾರತೀಯ ದಂಡ ಸಂಹಿತೆ, 1860 (ಇನ್ನು ಮುಂದೆ 'ಐಪಿಸಿ' ಎಂದು ಉಲ್ಲೇಖಿಸಲಾಗಿರುತ್ತದೆ) 498-ಎ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ, ಅನುಕ್ರಮವಾಗಿ ಆಪಾದಿತ ಸಂಖ್ಯೆ.3 ಹಾಗೂ 4 ಅಂದರೆ ಶಾರದಮ್ಮ ಹಾಗೂ ವಸಂತ್‌ಕುಮಾರ್ ವಿರುದ್ಧ ಪ್ರಕರಣವನ್ನು ನೋಂದಾಯಿಸಿರುತ್ತಾರೆ. ಮರುದಿನ (ಅಂದರೆ 2.4.1999) ತಹಸೀಲ್ದಾರ್‌ರವರು, ಮೃತಳನ್ನು ಭೇಟಿ ಮಾಡಿ, ಆಕೆ ಅಂಥ ಹೇಳಿಕೆ ನೀಡಲು ಸಮರ್ಥವಾಗಿರುತ್ತಾಳೆಂದು ಕರ್ತವ್ಯನಿರತ ವೈದ್ಯರಿಂದ ಸ್ಪಷ್ಟನೆ ಪಡೆದುಕೊಂಡ ತರುವಾಯ ಮರಣ ಕಾಲೀನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಇದು, ಪ್ರಾ.ಸಾ.21 ಆದ ವೈದ್ಯರು ಆ ಸಮಯದಲ್ಲಿ ತಾನು ಹಾಜರಿದ್ದು, ಆಕೆ ಅಂಥ ಹೇಳಿಕೆಗಳನ್ನು ನೀಡಲು ಸಮರ್ಥಳಾಗಿರುತ್ತಾಳೆಂದು, ನೀಡಿರುವ ಹೇಳಿಕೆಯೊಂದಿಗೆ ನಿಶಾನೆ ಪಿ.6 ಎಂದು ದಾಖಲಾಗಿರುತ್ತದೆ.

ಮೃತಳು, ಹೆಚ್ಚಿನ ವರದಕ್ಷಿಣೆ ತರುವಂತೆ ತನ್ನ ಅತ್ತೆ ಹಾಗೂ ಮೈದುನ ಇವರುಗಳ ಬೈಯ್ಗುಳ ಹಾಗೂ ನೀಡುತ್ತಿದ್ದ ಮಾನಸಿಕ ಕಿರುಕುಳಗಳನ್ನು ತಾಳದೆ ಬೆಂಕಿ ಹಚ್ಚಿಕೊಂಡಿದ್ದಾಗಿ ಹೇಳಿರುತ್ತಾಳೆ.

ಈಕೆ ಮೂರನೇ ದಿನ (ಅಂದರೆ 3.4.1999) ತನ್ನ ಗಾಯಗಳ ನೋವು ತಾಳಲಾರದೆ ಕೊನೆಯುಸಿರೆಳೆದಿರುತ್ತಾಳೆ. ಮರಣದ ಮಾಹಿತಿಯನ್ನು ಪಡೆದ ತರುವಾಯ, ಸಾಲೀಗ್ರಾಮ ಪೊಲೀಸ್ ಠಾಣೆಯ ಸಹಾಯಕ ಸಬ್ ಇನ್ಸ್‌ಪೆಕ್ಟರ್, ಐಪಿಸಿಯ 34ನೇ ಪ್ರಕರಣದ ಓದಿನೊಂದಿಗೆ 498–ಎ ಹಾಗೂ 304–ಬಿ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಆಪಾದಿತ ಸಂ.2 ರಿಂದ 4 ಇವರುಗಳ ವಿರುದ್ಧ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿಕೊಂಡಿರುತ್ತಾರೆ. ಹೆಚ್ಚಿನ ತನಿಖೆ ಹಾಗೂ ಇತರೆ ಕಾರ್ಯವಿಧಾನಗಳ ತರುವಾಯ, ಭಾರತೀಯ ದಂಡ ಸಂಹಿತೆಯ 34ನೇ ಪ್ರಕರಣದ ಓದಿನೊಂದಿಗೆ 498–ಎ, 302, 304–ಬಿ ಪ್ರಕರಣಗಳಡಿಯಲ್ಲಿ ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮ, 1961ರ 3, 4 ಹಾಗೂ 6ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಪ್ರಕಾಶ್ ಆಪಾದಿತ ಸಂಖ್ಯೆ.1 ಈತನ ತಂದೆ ತಾಯಿಗಳಾದ ಮುದ್ದಾನಾಯ್ಕ್ ಹಾಗೂ ಶಾರದಮ್ಮ ಆಪಾದಿತ ಸಂಖ್ಯೆ.2 ಹಾಗೂ 3, ಈತನ ಸಹೋದರ ಹಾಗೂ ಸಹೋದರಿಯರಾದ ವಸಂತಕುಮಾರ್ ಹಾಗೂ ಕೆ.ಎಂ. ಸಾವಿತ್ರಿ ಆಪಾದಿತ ಸಂಖ್ಯೆ 4 ಹಾಗೂ 5 ಈತನ ಭಾವ ಬೊಮ್ಮನಾಯ್ಕ ಆಪಾದಿತ ಸಂಖ್ಯೆ 6 ಇವರುಗಳ ವಿರುದ್ಧ ಆರೋಪಪಟ್ಟಿಯನ್ನು ಸಲ್ಲಿಸಿರುತ್ತಾನೆ. ಆಪಾದಿತರು ತಾವು ತಪ್ಪಿತಸ್ಥರಲ್ಲವೆಂದು ವಾದಿಸಿದ್ದು, ಈ ಸಂಬಂಧದಲ್ಲಿ ಅಧಿವಿಚಾರಿಸಬೇಕೆಂದು ಕ್ಲೇಮು ಮಾಡಿರುತ್ತಾರೆ. ಅವರನ್ನು ಅಧಿವಿಚಾರಿಸಿ, ಸಂಖ್ಯೆ.1 ರಿಂದ 4ರ ವರೆಗಿನ ಆಪಾದಿತ ಆಪಾದಿತರನ್ನು ದೋಷಿಗಳೆಂದು ನಿರ್ಣಯಿಸಲಾಗಿರುತ್ತದೆ. ಭಾರತ ದಂಡ ಸಂಹಿತೆಯ 304–ಬಿ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧವು ಏಳು ವರ್ಷಗಳ ಕಠಿಣ ಕಾರಾವಾಸ ಶಿಕ್ಷೆಯಾಗಿದ್ದು, ಕಡಿಮೆ ಅವಧಿಯ ಶಿಕ್ಷೆಗೆ ಸಂಬಂಧಿಸಿದಂತೆ ಭಾರತೀಯ ದಂಡ ಸಂಹಿಂತೆಯ 498–ಎ ಪ್ರಕರಣದಡಿಯಲ್ಲಿ ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮದ 3

ಹಾಗೂ 6ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ಅಪರಾಧಿಯೆಂದು ನಿರ್ಣೀತರಾಗಿರುತ್ತಾರೆ. ಶಿಕ್ಷೆಗಳು ಏಕಕಾಲದಲ್ಲಿ ಜಾರಿಯಾಗಬೇಕು.

ಈ ನ್ಯಾಯಾಲಯವು ಅಪೀಲಿನಲ್ಲಿ ಆಪಾದಿತ ಸಂಖ್ಯೆ.1, ಆಪಾದಿತ ಸಂಖ್ಯೆ.2 ಹಾಗೂ ಆಪಾದಿತ ಸಂಖ್ಯೆ 4 ಇವರುಗಳನ್ನು ಖುಲಾಸೆ ಮಾಡಿದ್ದು, ಆಪಾದಿತ ಸಂಖ್ಯೆ.3 ಮಾತ್ರ ಭಾರತೀಯ ದಂಡ ಸಂಹಿತೆಯ 498-ಎ ಪ್ರಕರಣದಡಿಯಲ್ಲಿನ ಅಪರಾಧಿಯಾಗಿದ್ದು, ಈಕೆಗೆ ಆರು ತಿಂಗಳ ಕಠಿಣ ಕಾರಾವಾಸ ಶಿಕ್ಷೆ ಹಾಗೂ 50,000/- ರೂ.ಗಳ ದಂಡವನ್ನು ಸಂದಾಯ ಮಾಡುವ ಶಿಕ್ಷೆಯನ್ನು ನೀಡಲಾಗಿರುತ್ತದೆ. ಈ ವಿಷಯವನ್ನು ಸರ್ವೋಚ್ಚ ನ್ಯಾಯಾಲಯಕ್ಕೂ ತೆಗೆದುಕೊಂಡು ಹೋಗಿದ್ದು, ಅಲ್ಲಿ ಅದು, ಈ ನ್ಯಾಯಾಲಯದ ತೀರ್ಪು ಸಮಸ್ಯಾತ್ಮಕವಾಗಿದ್ದು, ಇದು ಯುಕ್ತವಾದ ಕಾರಣವನ್ನು ಬಹಿರಂಗಪಡಿಸಿಲ್ಲ ಇಲ್ಲವೆ ದಾಖಲಾದ ಸಾಕ್ಷ್ಯವನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲವೆಂದು ಅಭಿಪ್ರಾಯಪಟ್ಟು, ಸರ್ವೋಚ್ಚ ನ್ಯಾಯಾಲಯವು, ವಿಷಯವನ್ನು ಹಿಂದಕ್ಕೆ ಕಳುಹಿಸಿರುತ್ತದೆ. ಈ ನ್ಯಾಯಾಲಯವು, ಮೃತಳ ಅತ್ತೆ, ಆಪಾದಿತ ಸಂಖ್ಯೆ.3 ಶಾರದಮ್ಮಳ ಸಂಬಂಧದಲ್ಲಿ ಮಾತ್ರ ಪ್ರಕರಣವನ್ನು ಪರಿಗಣಿಸಲು ಅಗತ್ಯಪಡಿಸಿರುತ್ತದೆ.

3. ಈ ನ್ಯಾಯಾಲಯದ ಮುಂದೆ ಎರಡು ಮುಖ್ಯ ಪ್ರಶ್ನೆಗಳು ಉದ್ಭವವಾಗಿದ್ದು, ಅವು ಈ ಮುಂದಿನಂತಿವೆ:

> (ಎ) ಪ್ರಾಸಿಕ್ಯೂಷನ್, ಮೃತಳು ಆತ್ಮಹತ್ಯೆ ಮಾಡಿಕೊಳ್ಳಲು ಆಪಾದಿತ ಸಂಖ್ಯೆ.3 ಕಾರಣಳೆಂಬ ನಿಖರವಾದ ಸಂಶಯವನ್ನು ಮೀರಿ ಏನನ್ನಾದರೂ ರುಜುವಾತು ಪಡಿಸಿರುತ್ತದೆಯೇ?
>
> (ಬಿ) ಮೃತಳು ಹಾಗೂ ಇತರರು ಹೇಳಿದ ಮಾನಸಿಕ ಕಿರುಕುಳ ಹಾಗೂ ಹಿಂಸೆಯು ಭಾರತದಂಡ ಸಂಹಿತೆಯ 498-ಎ ಪ್ರಕರಣದಡಿಯಲ್ಲಿನ ಕ್ರೌರ್ಯಕ್ಕೆ ಸಮನಾಗಿದೆಯೇ?

4. ಈ ನ್ಯಾಯಾಲಯದ ಮೊದಲ ಪ್ರಶ್ನೆಗೆ ಉತ್ತರಿಸಲು ನಿಶಾನೆ ಪಿ.6ರಲ್ಲಿ ಕಂಡುಬಂದಂಥ ಮೃತಳ ಮರಣ ಕಾಲೀನ ಹೇಳಿಕೆಯನ್ನು ಗಮನಿಸಬೇಕಾಗಿರುತ್ತದೆ. ಮೃತಳು ಆಸ್ಪತ್ರೆಗೆ ದಾಖಲಾದ ದಿನದಂದು ಪೊಲೀಸ್ ಕಾನ್‌ಸ್ಟೇಬಲ್, ಆಕೆಯಿಂದ ಹೇಳಿಕೆ ಪಡೆದಿದ್ದು, ಇದೊಂದು ಮೌಖಿಕ ದೂರಾಗಿದ್ದು, ಅದರಲ್ಲಿ ಆಕೆ, ತನ್ನ ಅತ್ತೆಯ ಬೈಯ್ಗುಳಗಳಿಂದ ತನ್ನ ಮನಸ್ಸಿಗೆ ಅಪಾರ ನೋವುಂಟಾಗಿದ್ದು, ಅವುಗಳನ್ನು ತಾಳಲಾರದೆ ತಾನು ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದಾಗಿ ತಿಳಿಸಿರುತ್ತಾಳೆ. ಮರುದಿನ ತಹಸೀಲ್ದಾರರಿಗೆ ಆಕೆ ನೀಡಿದ ಮರಣಕಾಲೀನ ಹೇಳಿಕೆಯಲ್ಲಿ, ಆಕೆ, ತಾನು ಮಾನಸಿಕವಾಗಿ ಹೆಚ್ಚು ಕಿರುಕುಳವನ್ನು ಅನುಭವಿಸಿದ್ದಾಗಿ, ಆಕೆಯ ಪತಿ ಮಾತ್ರವೇ ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದು, ತನ್ನೊಂದಿಗೆ ಆತ ಅನ್ಯೋನ್ಯವಾಗಿ ಇದ್ದುದಾಗಿ ತಿಳಿಸಿರುತ್ತಾಳೆ. ಎಷ್ಟೋ ಭಾರಿ ಊಟವಿಲ್ಲದೆ ಸಹ ಇದ್ದುದಾಗಿ ತಿಳಿಸಿರುತ್ತಾಳೆ.

ಒಬ್ಬ ವ್ಯಕ್ತಿಯ ಮರಣವು, ಎಲ್ಲಿ ಪ್ರಶ್ನಾರ್ಹವಾಗಿರುತ್ತದೋ, ಅಂತಹ ಮರಣದ ಸಂದರ್ಭದಲ್ಲಿ, ಆತನ ಅಥವಾ ಆಕೆಯ ಮರಣಕ್ಕೆ ಸಂಬಂಧಿಸಿದಂತ ಅಥವಾ ಆತನ ಮರಣದಲ್ಲಿ ಕಂಡುಬರುವಂಥ ವ್ಯವಹರಣೆಯ ಯಾವುದೇ ಸಂದರ್ಭಗಳಿಗೆ ಸಂಬಂಧಿಸಿದಂತಹ ಮರಣ ಕಾಲೀನ ಹೇಳಿಕೆಯು, ಮರಣ ಹೊಂದಿದ ಒಬ್ಬ ವ್ಯಕ್ತಿಯು ಮಾಡಿದ ಹೇಳಿಕೆಯಾಗಿದ್ದು, ಅಂಥ ಹೇಳಿಕೆಗಳು, ಅವರುಗಳು ಮರಣಶಯ್ಯೆಯಲ್ಲಿರುವ ಸಮಯದಲ್ಲಿ ಅವರು ಮಾಡಿರಲೀ ಅಥವಾ ಮಾಡಿಲ್ಲದಿರಲಿ ಹಾಗೂ ಇವರ ಮರಣದ ಕಾರಣವು ಪ್ರಶ್ನಾರ್ಹವಾಗಿರುವಲ್ಲಿನ ಕಾರ್ಯ ವಿಧಾನವು ಯಾವುದೇ ಸ್ವರೂಪದಲ್ಲಿರಲಿ, ಅವು ಭಾರತೀಯ ಸಾಕ್ಷ್ಯ ಅಧಿನಿಯಮದ 32ನೇ ಪ್ರಕರಣದಡಿಯಲ್ಲಿ ಯುಕ್ತವಾದವುಗಳಾಗಿರುತ್ತವೆ.

***ಉಕಾ ರಾಮ್ –ವಿರುದ್ಧ– ರಾಜಸ್ತಾನ್ ಸರ್ಕಾರ***[1], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಸಾಮಾನ್ಯವಾಗಿ ಮರಣಕಾಲೀನ ಹೇಳಿಕೆಯು ಏಕೆ ಸತ್ಯವಾದುದೇ

1. ಎಐಆರ್ 1988 ಎಸ್‌ಸಿ 1850

ಆಗಿರುತ್ತದೆ ಎಂಬುದನ್ನು ಪ್ರಸ್ತಾಪಿಸುತ್ತಾ, 'ನೆಮೊ ಮಾರ್‌ಚ್ಯೂರಸ್ ಪ್ರೊಯಿಸ್ಯೂಚರ್ ಮೆನ್‌ಸೈರ್' ಅಂದರೆ ಮನುಷ್ಯ ತನ್ನ ಕರ್ತಾರನ ಬಳಿಗೆ ತನ್ನ ಬಾಯಲ್ಲಿ ಸುಳ್ಳನ್ನು ಇಟ್ಟುಕೊಂಡು ಹೋಗಲಾರ ಹಾಗಾಗಿ ಆತ ಸುಳ್ಳನ್ನು ಹೇಳಲಾರ ಎಂಬ ಇಂಗಿತವನ್ನು ಸೂಚಿಸಿರುತ್ತದೆ. ತನ್ನ ಸುಳ್ಳಿನ ಪ್ರಯೋಜನವನ್ನು ತಾನು ಪಡೆದುಕೊಳ್ಳದಿರುವಾಗ, ಅವನು ಏತಕ್ಕಾದರು ಸುಳ್ಳು ಹೇಳುತ್ತಾನೆ. ಹಾಗಾಗಿ, ಒಬ್ಬ ವ್ಯಕ್ತಿ ಮರಣಶಯ್ಯೆಯಲ್ಲಿರುವಾಗ, ಈ ಪ್ರಪಂಚದ ಭರವಸೆಯನ್ನು ಕಳೆದುಕೊಂಡಿರುವಾಗ, ಸುಳ್ಳು ಮಾತನಾಡುವ ಪ್ರತಿಯೊಂದು ಉದ್ದೇಶವು ಮೌನವಾದಾಗ ಹೇಳಿಕೆಗಳನ್ನು ಸ್ವಲ್ಪಮಟ್ಟಿಗೆ ಅತಿ ಎಂದೇ ನಿರೂಪಿಸಿಲಾಗಿರುತ್ತದೆ ಹಾಗೂ ಮನಸ್ಸು ಸತ್ಯವನ್ನೇ ಮಾತನಾಡುವ ಇಚ್ಛಾಶಕ್ತಿಯಿಂದ ಪ್ರೇರೇಪಿತವಾಗಿದ್ದು, ಪರಿಸ್ಥಿತಿಯು ತುಂಬಾ ಗಂಭೀರವೂ ಹಾಗೂ ಕಾನೂನುಬದ್ಧವೂ ಆಗಿದ್ದು, ಅದನ್ನು ನ್ಯಾಯಾಲಯದಲ್ಲಿ ಪ್ರಮಾಣ ಮಾಡಿಸುವಾಗ ವಿಧಿಸುವಂಥ ವಿಧಿ ವಿಧಾನಕ್ಕೆ ಸಮವೆಂದೇ ಹೊಣೆಗಾರಿಕೆಯನ್ನು ಸೃಜಿಸುವಂಥ ಕಾನೂನಿನ ಮೂಲಕ ಪರಿಗಣಿಸಲಾಗಿರುತ್ತದೆ.

5. ಈಗ, ಯಾರು ಮರಣಕಾಲೀನ ಹೇಳಿಕೆ ತೆಗೆದುಕೊಳ್ಳಬಹುದು ಹಾಗೂ ಯಾರು ಮೃತ ವ್ಯಕ್ತಿಯ ಮನಸ್ಥಿತಿಯು ಸರಿಯಾಗಿದೆಯೆಂದು ಅಧಿಕೃತಗೊಳಿಸಬಹುದು ಹಾಗೂ ಎಷ್ಟು ಮರಣಕಾಲೀನ ಹೇಳಿಕೆಗಳನ್ನು ಪಡೆಯುಬಹುದು? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ?

ಈ ಪ್ರಶ್ನೆಗಳೊಂದಿಗೆ ಸರ್ವೋಚ್ಚ ನ್ಯಾಯಾಲಯವು ***ಕುಶಾಲ್ ರಾವ್ -ವಿರುದ್ಧ- ಬಾಂಬೆ ಸರ್ಕಾರ*** [2] ಪ್ರಕರಣದಲ್ಲಿ, ಮರಣ ಕಾಲೀನ ಹೇಳಿಕೆಯ ವಿಶ್ವಾಸನೀಯತೆಗೆ ಸಂಬಂಧಿಸಿದಂತೆ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ವಿಧಿಸಿರುತ್ತದೆ. ***ಮಧ್ಯಪ್ರದೇಶ ಸರ್ಕಾರ -ವಿರುದ್ಧ - ದಾಲ್ ಸಿಂಗ್*** [3] ಮತ್ತೊಂದು ತೀರ್ಪಿನಲ್ಲಿ 2013ರ ಮೇ ತಿಂಗಳಲ್ಲಿ, ಸರ್ವೋಚ್ಚ ನ್ಯಾಯಾಲಯವು, ಮರಣ ಕಾಲೀನ ಹೇಳಿಕೆಯನ್ನು ತೆಗೆದುಕೊಳ್ಳಲು ಒಬ್ಬ ವ್ಯಕ್ತಿಯು ಪೊಲೀಸ್ ಅಧಿಕಾರಿ ಅಥವಾ ವೈದ್ಯ ಅಥವಾ ಮ್ಯಾಜಿಸ್ಟ್ರೇಟರೇ ಆಗಿರದೆ, ಕಾನೂನಿನಲ್ಲಿ, ನಿಜವೆಂದು

2. ಎಐಆರ್ 1958 ಎಸ್‌ಸಿ 22

3. (2013) 14 ಎಸ್‌ಸಿಸಿ 159

ಕಂಡು ಬರಬೇಕು. ಪೀಠವು, ಮರಣ ಕಾಲೀನ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವ ವ್ಯಕ್ತಿಯು, ಹೇಳಿಕೆ ನೀಡುವ ವ್ಯಕ್ತಿಯ ಮಾನಸಿಕ ಸ್ವಾಸ್ಥ್ಯ ಸರಿಯಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳಬೇಕೆಂಬ ಎಚ್ಚರಿಕೆಯನ್ನು ನೀಡುತ್ತದೆ.

ಅಲ್ಲದೆ, ನ್ಯಾಯಾಲಯವು, ಮರಣಕಾಲೀನ ಹೇಳಿಕೆಯನ್ನು ದಾಖಲಿಸಿಕೊಳ್ಳುವಂಥ ವ್ಯಕ್ತಿಯು, ಹೇಳಿಕೆ ನೀಡುತ್ತಿರುವ ವ್ಯಕ್ತಿಯು ಸರಿಯಾದ ಮನಸ್ಥಿತಿಯಲ್ಲಿದ್ದಾನೆ ಹಾಗೂ ಆತ ಅಂಥ ಹೇಳಿಕೆ ನೀಡಲು ಸಮರ್ಥವಾಗಿದ್ದಾನೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾದುದು ಹೇಳಿಕೆಯನ್ನು ದಾಖಲಿಸಿಕೊಳ್ಳುವ ವ್ಯಕ್ತಿಯ ವಿವೇಚನೆಗೆ ಬಿಟ್ಟಿರುತ್ತದೆ ಹಾಗೂ ಮರಣ ಕಾಲೀನ ಹೇಳಿಕೆಯನ್ನು ಸಾಕ್ಷ್ಯದಂತೆ ಒಪ್ಪಿಕೊಳ್ಳಬಹುದಾದಂತೆ ಮಾಡಲು ಮೃತ ವ್ಯಕ್ತಿಯ ಮಾನಸಿಕ ಸ್ಥಿತಿಯ ಬಗ್ಗೆ ವೈದ್ಯರ ಪ್ರಮಾಣಪತ್ರದ ಅವಶ್ಯಕತೆಯಿರುವುದಿಲ್ಲವೆಂದೂ ಅಭಿಪ್ರಾಯಪಟ್ಟಿರುತ್ತದೆ.

ಈ ಪ್ರಕರಣದಲ್ಲಿ ಎರಡು ಮರಣಕಾಲೀನ ಹೇಳಿಕೆಗಳಿದ್ದು ಮ್ಯಾಜಿಸ್ಟ್ರೇಟರಿಗೆ ನೀಡಲಾದುದನ್ನು ಆದ್ಯತೆಯಲ್ಲಿ ತೆಗೆದುಕೊಳ್ಳಲಾಗಿದೆ. ಅಲ್ಲದೆ, ನ್ಯಾಯಾಲಯವು, ಎರಡೂ ಮರಣಕಾಲೀನ ಹೇಳಿಕೆಗಳಲ್ಲಿ ಯಾವುದೇ ವೈರುದ್ಯಗಳಿಲ್ಲದೆ, ಎರಡರಲ್ಲೂ, ಮೃತಳು ತನ್ನ ಅತ್ತೆ ಹೆಚ್ಚಿನ ವರದಕ್ಷಿಣೆ ತರಲಿಲ್ಲವೆಂಬ ಕಾರಣಕ್ಕೆ ನೀಡಿದ ಕಿರುಕುಳ ಹಾಗೂ ಹಿಂಸೆಯನ್ನು ತಾಳಲಾರದೆ, ತಾನೇ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದಾಗಿ ತಿಳಿಸಿರುತ್ತಾಳೆಂಬುದನ್ನು ಮನಗಂಡಿದೆ. ಆದ್ದರಿಂದ, ಮೃತಳ ಮನಸ್ಥಿತಿಯು ಸರಿಯಾಗಿದೆ ಎಂಬುದನ್ನು ಖಚಿತಪಡಿಸುವ ಪ್ರಮಾಣಪತ್ರ ಇಲ್ಲವೆಂಬ ವಾದಕ್ಕೆ ಯಾವುದೇ ಮಹತ್ವವಿರುವುದಿಲ್ಲ. ಹಾಗಾಗಿ ಮರಣ ಕಾಲೀನ ಘೋಷಣೆಯು ***ಶ್ರೀಮತಿ ಕಮಲ – ವಿರುದ್ಧ – ಪಂಜಾಬ್ ಸರ್ಕಾರ*** [4] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿದಂತೆ ಅತ್ತೆಯ ವಿರುದ್ಧದ ಸಾಕ್ಷ್ಯವು ನಿರಪೇಕ್ಷಣೀಯವಾದುದಾಗಿದ್ದು, ಅದು ಈ ಮುಂದಿನಂತಿರುತ್ತದೆ:

4. ಎಐಆರ್ 1993 ಎಸ್‌ಸಿ 374

> *"ಕುಶಾಲ್ ರಾವ್ -ವಿರುದ್ಧ - ಬಾಂಬೆ ಸರ್ಕಾರ, 1958 ಎಸ್‌ಸಿಆರ್ 552 ಮೇರೆಗೆ ಮರಣಕಾಲೀನ ಹೇಳಿಕೆಯು ಅಪರಾಧ ನಿರ್ಣಯದ ಏಕಮಾತ್ರ ಆಧಾರವನ್ನು ರೂಪಿಸಬಹುದಾಗಿದ್ದು, ಇದು ಅಸ್ಥಿರತೆಗಳಿಂದ ಮುಕ್ತವಾಗಿ, ಹಲವಾರು ಪರೀಕ್ಷೆಗಳನ್ನು ಪೂರ್ಣಗೊಳಿಸಿರುತ್ತದೆಂಬುದು ಸಂಪೂರ್ಣವಾಗಿ ಇತ್ಯರ್ಥಗೊಂಡಿರುತ್ತದೆ".*

ಪ್ರಾಸಿಕ್ಯೂಷನ್, ಕೆ.ಆರ್.ನಗರ ಆಸ್ಪತ್ರೆಯಿಂದ ಬಿ.ಎಂ. ಆಸ್ಪತ್ರೆಗೆ ವಿಶಾಲಾಕ್ಷಿಯನ್ನು ಸ್ಥಳಾಂತರಿಸುವಾಗ, ಪ್ರಕಾಶ್ ಆಕೆ ನೋಡಲು ಹೇಗೆ ಕಂಡರೂ ಸಹ ಆಕೆಯನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತೇನೆಂದೂ, ತನ್ನ ಕುಟುಂಬದವರನ್ನು ದೂರಬಾರದೆಂದೂ ಕೋರಿಕೊಂಡಿರುತ್ತಾನೆಂಬ ವಿಷಯವನ್ನು ಸಮರ್ಥಿಸುವಂಥ ಪ್ರಾ.ಸಾ.1 ಹಾಗೂ ಪ್ರಾ.ಸಾ.5ರವರುಗಳ ಹೇಳಿಕೆಯನ್ನು ಉದಾಹರಿಸಿರುತ್ತದೆ. ಇದರೊಟ್ಟಿಗೆ ಮೃತಳ ಗಾಯದ ಪ್ರಮಾಣಪತ್ರವಾಗಿರುವ ನಿಶಾನೆ ಪಿ.10ರಲ್ಲಿ ಮತ್ತೊಮ್ಮೆ, ಈಕೆ ತನ್ನ ಅತ್ತೆಯ ಬೈಗುಳಗಳನ್ನು ತಾಳಲಾರದೆ ತಾನು ಸೀಮೆಎಣ್ಣೆ ಸುರಿದುಕೊಂಡು, ಬೆಂಕಿ ಹಚ್ಚಿಕೊಂಡಿದ್ದಾಗಿ ಹೇಳಿರುತ್ತಾಳೆ. ಹಾಗಾಗಿ, ಪ್ರಾಸಿಕ್ಯೂಷನ್, ಮೃತಳ ಅತ್ತೆಯು, ಮೃತಳಿಗೆ ನೀಡಿದ ಮಾನಸಿಕ ಹಿಂಸೆ ಹಾಗೂ ಕಿರುಕುಳಗಳೇ, ಮೃತಳು ಬೆಂಕಿಹಚ್ಚಿಕೊಳ್ಳುವ ಹಿಂದಿನ ಕಾರಣವಾಗಿರುತ್ತದೆಂಬುದನ್ನು ರುಜುವಾತು ಪಡಿಸಿರುತ್ತದೆ.

ಮೃತಳು ಬೆಂಕಿ ಹಚ್ಚಿಕೊಂಡಾಗ ಆಕೆಯ ರಕ್ಷಣೆಗೆ ಆಕೆಯ ಅತ್ತೆ ಬರಲಿಲ್ಲವೆಂದು ಮೃತಳು ನೀಡಿದ ಹೇಳಿಕೆಗೆ ಸಂಬಂಧಿಸಿದಂತೆ, ನಿಶಾನೆ ಪಿ.14ರಲ್ಲಿ, ತಾನು ತನ್ನ ಸೊಸೆಯನ್ನು ರಕ್ಷಿಸಲು ಹೋದಾಗ ತನಗೂ ಗಾಯಗಳಾದವೆಂದು ಹೇಳಿ ಆಪಾದಿತ ಸಂಖ್ಯೆ.3 ರ ಈಕೆಯ ಗಾಯದ ಪ್ರಮಾಣಪತ್ರವನ್ನು ಸಲ್ಲಿಸಿರುವುದರಿಂದ, ಮರಣಕಾಲೀನ ಹೇಳಿಕೆಯನ್ನು ಪರಿಗಣಿಸಬಾರದೆಂದು ಅಪೀಲುದಾರರು ಕೇಳಿಕೊಂಡಿರುತ್ತಾರೆಂಬುದನ್ನು ಕಾಣಬಹುದಾಗಿದೆ. ಈ ಸಂಬಂಧದಲ್ಲಿ ಯಾವುದೇ ಇತರೆ ಸಾಕ್ಷ್ಯಗಳು ಲಭ್ಯವಿಲ್ಲದಿರುವುದರಿಂದ, ಮೃತಳ ಮರಣ ಕಾಲೀನ

ಘೋಷಣೆಯನ್ನು ಈ ನ್ಯಾಯಾಲಯವು ನಂಬಲೇಬೇಕೆಂದು ಪರಿಗಣಿಸಲಾಗಿರುತ್ತದೆ. ಮೇಲಿನ ವಾದವು ಊರ್ಜಿತವಾಗುವುದಿಲ್ಲ. ಪ್ರಾ.ಸಾ.10 ಹಾಗೂ ಪ್ರಾ.ಸಾ.15ರವರುಗಳು, ಆಪಾದಿತ ಸಂಖ್ಯೆ.1 ಈತನ ತಂದೆ, ಯಾವುದೇ ಚಿನ್ನ ಹಾಗೂ ಹಣವನ್ನು ಕೇಳಿರುವುದಿಲ್ಲ. ಮದುವೆಯನ್ನು ಚೆನ್ನಾಗಿ ಮಾಡಿಕೊಟ್ಟರೆ ಸಾಕು ಎಂದು ಹೇಳಿರುತ್ತೇವೆ. ಅಲ್ಲದೆ, ಅವರು, ಯಾವುದೇ ಚಿನ್ನದುಂಗುರ ಹಾಗೂ ಮದುವೆ ಬಟ್ಟೆಗಳನ್ನು ನೀಡಲಾದ ಬಗ್ಗೆ ತಮಗೇನೂ ತಿಳಿದಿಲ್ಲವೆಂದು, ಪ್ರಾ.ಸಾ.1 ಹಾಗೂ ಪ್ರಾ.ಸಾ.15ರವರುಗಳು ನೀಡಿರುವ ಹೇಳಿಕೆಗಳು ಪ್ರಾ.ಸಾ.1, ಪ್ರಾ.ಸಾ.3, ಪ್ರಾ.ಸಾ.4, ಪ್ರಾ.ಸಾ.5 ಹಾಗೂ ಪ್ರಾ.ಸಾ.14 ರವರುಗಳು ನೀಡಿರುವ ಹೇಳಿಕೆಗೆ ವಿರುದ್ಧವಾದುದಾಗಿದೆ ಎಂದು ಕಂಡುಬಂದಿದೆ. ಮೋಟಾರು ಸೈಕಲ್‌ನ ಖರೀದಿಯ ಮುಖ್ಯ ಸಾಕ್ಷ್ಯ ಹಾಗೂ ಪ್ರಾ.ಸಾ.14ರವರ ಸಾಕ್ಷ್ಯ–ಇವುಗಳು ಅಂಗೀಕಾರಾರ್ಹವಾದವುಗಳಾಗಿವೆ. ಹಾಗಾಗಿ, ಪ್ರಾ.ಸಾ.10 ಹಾಗೂ ಪ್ರಾ.ಸಾ.15ರ ಸಾಕ್ಷ್ಯವು ನಂಬಲರ್ಹವಾಗಿರುವುದಿಲ್ಲ.

ಪ್ರಾ.ಸಾ.16 (ನೆರೆಮನೆಯಾಕೆ) ಮೃತಳು ಬೇಸರದಿಂದ ಇದ್ದದ್ದನ್ನಾಗಲೀ, ಆಕೆ ಹಾಗೂ ಆಕೆಯ ಅತ್ತೆ–ಮಾವಂದಿರುಗಳ ಮಧ್ಯೆ ಜಗಳವಾದದ್ದನ್ನು ತಾನು ಕೇಳಿಯೂ ಇಲ್ಲ ಅಥವಾ ನೋಡಿಯೂ ಇಲ್ಲವೆಂದು ತಿಳಿಸಿರುತ್ತಾಳೆ. ಮತ್ತೊಮ್ಮೆ ಪರಿಸ್ಥಿತಿಯ ಮೃತಳ ಹೇಳಿಕೆಗಳು ನೆರೆಮನೆಯಾಕೆಯ ಹೇಳಿಕೆಗಳು ಪರಸ್ಪರ ವಿರುದ್ಧವಾಗಿದೆಯೆಂಬುದನ್ನು ವಿವರಿಸುತ್ತದೆ. ***ಸುರೀಂದರ್ ಸಿಂಗ್ –ವಿರುದ್ಧ– ಹರಿಯಾಣ ಸರ್ಕಾರ*** [5] ಪ್ರಕರಣದಲ್ಲಿ ನ್ಯಾಯಾಲಯವು, ಸಾಕ್ಷಿಗಳು, ಕ್ರೌರ್ಯ ನಡೆದಂಥ ಮನೆಯ ನಿವಾಸಿಗಳೇ ಆಗಿದ್ದು, ಅದೇ ಕುಟುಂಬದ ಸಂಬಂಧಿಗಳೂ ಆಗಿರುವುದರಿಂದ ಕುಟುಂಬದ ಆಂತರಿಕ ವಿಷಯಗಳನ್ನು ತಿಳಿಸುತ್ತಾರೆಂದು ಹಾಗೂ ಸಾಕ್ಷ್ಯ ನೀಡುತ್ತಾರೆಂದು ನಂಬುವುದು ಕಷ್ಟಸಾಧ್ಯವಾದುದೆಂದು ಅಭಿಪ್ರಾಯಪಟ್ಟಿರುತ್ತದೆ. ಆದ್ದರಿಂದ, ನೆರೆಮನೆಯವರ ಹೇಳಿಕೆಯು ಸತ್ಯವಾದುದಾಗಿದ್ದರೂ, ಮೃತಳ ಮನೆಯ ನಾಲ್ಕು ಗೋಡೆಗಳ ಮಧ್ಯೆ ಏನೂ ಆಗಿಲ್ಲ ಹಾಗೂ ಆಕೆಯನ್ನು ಕೆಟ್ಟದಾಗಿ ನಡೆಸಿಕೊಂಡಿಲ್ಲವೆಂದು ನಂಬಲು ಸಾಧ್ಯವಾಗುವುದಿಲ್ಲ.

5. (2014) 4 ಎಸ್‌ಸಿಸಿ 129

ಅಲ್ಲದೆ, ಮೃತಳ ಸಹೋದರಿ ನಾಗರತ್ನಳ ಸಾಕ್ಷ್ಯವನ್ನು ಸಹ ತೆಗೆದುಕೊಳ್ಳಲಾಗಿದ್ದು, ಅದರಲ್ಲಿ ಆಕೆ, ತಾನು ತನ್ನ ಮೃತ ಸಹೋದರಿಗೆ ದೂರವಾಣಿ ಕರೆ ಮಾಡಿದಾಗ, ತನ್ನ ಸಹೋದರಿ ಕರೆಯನ್ನು ಸ್ವೀಕರಿಸಿದಳು, ಆಗ ಆಪಾದಿತ ಸಂಖ್ಯೆ 3 ಹಾಗೂ ಆಪಾದಿತ ಸಂಖ್ಯೆ.4 ಮೃತಳನ್ನು ಬೈಯುತ್ತಿದ್ದರು. ವಿಷಯ ಏನೆಂದು ಈಕೆ ಕೇಳಿದಾಗ, ಈಗ ಸದ್ಯಕ್ಕೆ ಏನನ್ನು ಹೇಳಲು ಸಾಧ್ಯವಾಗುತ್ತಿಲ್ಲವೆಂದು ಹೇಳಿ, ತರುವಾಯ ಕರೆಯನ್ನು ಸ್ಥಗಿತಗೊಳಿಸಿ ತನ್ನ ದಾರಿ ತಾನೇ ನೋಡಿಕೊಂಡಿದ್ದಾಳೆಂದು ಸಾಕ್ಷ್ಯ ನೀಡಿರುತ್ತಾಳೆ.

ಮರಣಕಾಲೀನ ಹೇಳಿಕೆಗೆ ನೀಡಲಾದ ಹೆಚ್ಚಿನ ಪ್ರಾಮುಖ್ಯತೆಯೊಂದಿಗೆ ಈ ಎಲ್ಲಾ ವಾಸ್ತವಾಂಶಗಳು, ಮೃತಳು ಆತ್ಮಹತ್ಯೆ ಮಾಡಿಕೊಳ್ಳುವಂಥ ಮಿತಿ ಮೀರಿದ ಹೆಜ್ಜೆ ಇಡಲು ಆಕೆಯ ಅತ್ತೆಯೇ ಕಾರಣವೇ ಎಂಬ ಯುಕ್ತ ಸಂದೇಹವನ್ನು ಮೀರಿ ಸ್ಥಿರೀಕರಿಸುತ್ತವೆ ಹಾಗೂ ರುಜುವಾತುಪಡಿಸುತ್ತವೆ.

6. ಎರಡನೇ ಪ್ರಶ್ನೆಗೆ ಸಂಬಂಧಿಸಿದಂತೆ, ಈ ನ್ಯಾಯಾಲಯವು, ಅತ್ತೆಯ ಯಾವ ಕೃತ್ಯಗಳು ಭಾರತೀಯ ದಂಡ ಸಂಹಿತೆಯ 498ಎ ಪ್ರಕರಣದಡಿಯಲ್ಲಿನ ಅಪರಾಧವನ್ನು ರೂಪಿಸಿದೆ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಅದು ಈ ಮುಂದಿನಂತಿರುತ್ತದೆ:

> *498ಎ. ಮಹಿಳೆಯು ಗಂಡ ಅಥವಾ ಗಂಡನ ಸಂಬಂಧಿಯು ಅವಳ ಮೇಲೆ ಕ್ರೌರ್ಯ ನಡೆಸುವುದು:– ಮಹಿಳೆಯ ಗಂಡ ಅಥವಾ ಗಂಡನ ಸಂಬಂಧಿಯಾಗಿರುವ ಯಾವನೇ ವ್ಯಕ್ತಿಯು ಅಂಥ ಮಹಿಳೆಯ ಮೇಲೆ ಕ್ರೌರ್ಯ ನಡೆಸಿದರೆ ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ್ದಂಥ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.*

*ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ, 'ಕ್ರೌರ್ಯ' ಎಂದರೆ, –*

*(ಎ) ಮಹಿಳೆಯನ್ನು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುವ ಅಥವಾ ಆ ಮಹಿಳೆಯ ಪ್ರಾಣಕ್ಕೆ ದಕ್ಕೆ, ಅವಯವ ಅಥವಾ ಆರೋಗ್ಯಕ್ಕೆ ಮಾನಸಿಕವಾಗಿಯಾಗಲಿ ಅಥವಾ ದೈಹಿಕವಾಗಿಯಾಗಲಿ ತೀವ್ರ ಕ್ಷತಿ ಅಥವಾ ಅಪಾಯ ಉಂಟು ಮಾಡುವ ಸಂಭವವಿರುವಂಥ ಸ್ವರೂಪದ ಯಾವುದೇ ಉದ್ದೇಶ ಪೂರ್ವಕ ವರ್ತನೆ; ಅಥವಾ*

*(ಬಿ) ಅಂಥ ಪೀಡನೆಯು ಯಾವುದೇ ಸ್ವತ್ತು ಅಥವಾ ಬೆಲೆ ಬಾಳುವ ಭದ್ರತೆಗಾಗಿ ಯಾವುದೇ ವಿಧಿವಿರುದ್ಧ ತಗಾದೆಯನ್ನು ಪೂರೈಸಲು ಮಹಿಳೆ ಅಥವಾ ಅವಳಿಗೆ ಸಂಬಂಧಪಟ್ಟ ಯಾವನೇ ವ್ಯಕ್ತಿಯನ್ನು ಒತ್ತಾಯಪಡಿಸುವ ದೃಷ್ಟಿಯಿಂದ ಅಥವಾ ಅಂಥ ತಗಾದೆಯನ್ನು ಪೂರೈಸಲು ಆ ಮಹಿಳೆ ಅಥವಾ ಅವಳಿಗೆ ಸಂಬಂಧಪಟ್ಟ ಯಾವನೇ ವ್ಯಕ್ತಿಯು ವಿಫಲನಾದ ಕಾರಣದಿಂದ ಆಗಿರುವಲ್ಲಿ ಆ ಮಹಿಳೆಯ ಪೀಡನೆ.*

ಪ್ರಾ.ಸಾ.1, ಪ್ರಾ.ಸಾ.3 ರಿಂದ 5 ಹಾಗೂ ಪ್ರಾ.ಸಾ.14ರವರುಗಳ ಹೇಳಿಕೆಗಳ ಮೂಲಕ, ವರದಕ್ಷಿಣೆಗಾಗಿ ಬೇಡಿಕೆಯಿತ್ತು. ಈ ಸಂಬಂಧವಾಗಿ ಮಾತುಕತೆ ಮಾಡಿ ಅಂತಿಮವಾಗಿ ಆಪಾದಿತ ಸಂಖ್ಯೆ 1ರ ಕುಟುಂಬಕ್ಕೆ ಹಸ್ತಾಂತರಿಸಲಾಗಿರುತ್ತದೆಂಬುದು ತಿಳಿದುಬಂದಿರುತ್ತದೆ. ಇದಾದ ನಂತರ, ಆಪಾದಿತ ಸಂಖ್ಯೆ.3 ಹೆಚ್ಚಿನ ವರದಕ್ಷಿಣೆಗಾಗಿ ಮೃತಳಿಗೆ ಕಿರುಕುಳ ನೀಡಲಾಗಿದೆಯೆಂಬುದು ಕಂಡು ಬಂದಿದೆ. ಪ್ರಾ.ಸಾ.1ರ ಸಾಕ್ಷ್ಯವು ಮೃತಳು ಹೆಚ್ಚಿನ ವರದಕ್ಷಿಣೆ ತರಲಿಲ್ಲವೆಂಬ ಕಾರಣಕ್ಕೆ ಮಾನಸಿಕ ಹಾಗೂ ದೈಹಿಕ ಕಿರುಕುಳವನ್ನು ಅನುಭವಿಸುತ್ತಾಳೆಂಬುದನ್ನು ರುಜುವಾತುಪಡಿಸುತ್ತದೆ.

ಮರಣಕಾಲೀನ ಹೇಳಿಕೆ ಹಾಗೂ ಗಾಯದ ಪ್ರಮಾಣಪತ್ರದಲ್ಲಿ ಆಪಾದಿತ ಸಂಖ್ಯೆ.3 ನೀಡುತ್ತಿದ್ದ ಮಾನಸಿಕ ಕಿರುಕುಳ, ಹಿಂಸೆ ಹಾಗೂ ಬೈಗುಳಗಳನ್ನು ತಾಳಲಾರದೆ ಹಾಗೆ ಮಾಡಿಕೊಂಡೆನೆಂದು ಮೃತಳು ಹೇಳಿರುತ್ತಾಳೆ. ಮರಣ ಕಾಲೀನ ಹೇಳಿಕೆಯಲ್ಲಿ, ಮೃತಳು, ವಾಸ್ತವವಾಗಿ, ಯಾವ ರೀತಿಯ ಮಾನಸಿಕ ಕಿರುಕುಳ ಹಾಗೂ ಹಿಂಸೆಯನ್ನು ಅನುಭವಿಸಿದ್ದಾಗಿ ನಿರ್ದಿಷ್ಟವಾಗಿ ನಮೂದಿಸಿರುವುದಿಲ್ಲ. ಆದರೆ ಕ್ರೌರ್ಯದ ಪ್ರಮಾಣ ಬೇರೆ ಬೇರೆಯಾಗಿದ್ದು, ಕ್ರೌರ್ಯವು ಒಬ್ಬ ವ್ಯಕ್ತಿಗಿಂತ ಮತ್ತೊಬ್ಬ ವ್ಯಕ್ತಿಗೆ ಭಿನ್ನವಾಗಿಯೂ ಇರುತ್ತದೆ ಎಂಬುದು ಉದಾಹರಿತ ಪ್ರಕರಣಗಳ ಸರಣಿಯಲ್ಲಿ ಸ್ಪಷ್ಟವಾಗಿಯೂ ಇತ್ಯರ್ಥವಾಗಿರುತ್ತದೆ. ಆದಾಗ್ಯೂ, ಭಾರತೀಯ ದಂಡ ಸಂಹಿತೆಯ 498-ಎ ಪ್ರಕರಣದ (ಎ) ಹಾಗೂ (ಬಿ) ವಿವರಣೆಯ ಸಂಬಂಧದೊಂದಿಗೆ ಈ ಪ್ರಕರಣವು ಆಪಾದಿತ ಸಂಖ್ಯೆ 3 ನಿರಂತರವಾಗಿ ಹಣವನ್ನು ಕೇಳುತ್ತಲೇ ಇದ್ದು, ಇದನ್ನು ಆಕೆ ಪಾಲಿಸದಿದ್ದಾಗ, ಆಕೆಗೆ ಕಿರುಕುಳ ನೀಡಿರುವುದು ಖಂಡಿತವಾಗಿಯು ಆಕೆಗೆ ನೀಡಿರುವ ಕ್ರೌರ್ಯಕ್ಕೆ ಕಾರಣವಾಗಿರುತ್ತದೆ ಎಂಬುದಕ್ಕೆ ಆಧಾರವನ್ನು ಒದಗಿಸಿಕೊಡುತ್ತದೆ.

ಪ್ರಾ.ಸಾ.4 ತನ್ನ ಸಾಕ್ಷ್ಯದಲ್ಲಿ, ಮೃತಳು ಆಪಾದಿತ ಸಂಖ್ಯೆ 5 ಹಾಗೂ ಆಪಾದಿತ ಸಂಖ್ಯೆ 6ರ ಮನೆಯಿಂದ ಹಿಂತಿರುಗಿದ್ದಾಳೆಯೆ ಎಂಬುದನ್ನು ತಿಳಿದುಕೊಳ್ಳಲು ಆಪಾದಿತ ಸಂಖ್ಯೆ.1ರ ಮನೆಗೆ ದೂರವಾಣಿ ಕರೆಯನ್ನು ಮಾಡಿದ್ದು, ವಿಶಾಲಾಕ್ಷಿ ಕರೆಯನ್ನು ಸ್ವೀಕರಿಸಿದ್ದು, ಕೆಲವೇ ಕ್ಷಣಗಳೊಳಗೆ, ಆಪಾದಿತ ಸಂ.3 ಹಾಗೂ ಆಪಾದಿತ ಸಂಖ್ಯೆ.4 ಆಕೆಯನ್ನು ಬೈಯುತ್ತಿದ್ದದ್ದನ್ನು ತಾನು ಕೇಳಿಸಿಕೊಂಡಿದ್ದಾಗಿಯೂ ಹಾಗೂ ಕರೆಯನ್ನು ಕೂಡಲೇ ಕಡಿತಗೊಳಿಸದ್ದಾಗಿಯೂ ತಿಳಿಸಿರುತ್ತಾಳೆ. ಒಬ್ಬ ವ್ಯಕ್ತಿಯನ್ನು ಮೌಖಿಕವಾಗಿ ಬೈಯ್ಯುವುದು ಕ್ರೌರ್ಯಕ್ಕೆ ಕಾರಣವಾಗುತ್ತದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆಪಾದಿತ ಸಂಖ್ಯೆ. 3 ಹಾಗೂ ಆಪಾದಿತ ಸಂಖ್ಯೆ.4 ಮೃತಳನ್ನು ಬೈದಿರುವುದಕ್ಕೆ ಕಾರಣ ತಿಳಿಯದಾಗಿದ್ದು, ಕೇವಲ ಕೂಗಾಡಿರುವುದನ್ನು ಕ್ರೌರ್ಯವೆಂದು ಪರಿಗಣಿಸಬೇಕೆ ಅಥವಾ ಬೇಡವೇ ಎಂಬುದು ಈಗಿನ ಪ್ರಶ್ನೆಯಾಗಿರುತ್ತದೆ. ಇದು, ಆಪಾದಿತ ಸಂಖ್ಯೆ.3ರ ಬೈಗುಳದಿಂದ ತಾನು

ತನಗೇ ಬೆಂಕಿ ಹಚ್ಚಿಕೊಂಡೆನೆಂದು ತನ್ನ ಗಾಯದ ಪ್ರಮಾಣಪತ್ರದಲ್ಲಿ ಮೃತಳು ಹೇಳಿದಂಥ ಹೇಳಿಕೆಯನ್ನು ಪ್ರಶ್ನಾರ್ಹಗೊಳಿಸುತ್ತದೆ.

ಮುಂದುವರೆದು, ಪ್ರಾ.ಸಾ.1 ತನ್ನ ಮಗಳು ಮನೆಗೆ ಬಂದಿದ್ದಾಗ, ತಾನು ಮದುವೆಯಾಗಿ ಹೋಗಿರುವ ಮನೆಮಂದಿಯೆಲ್ಲ ತನಗೆ ತೊಂದರೆ ನೀಡುತ್ತಿದ್ದು, ಒಂದು ಲಕ್ಷ ರೂ.ಹಣವನ್ನು ಅಥವಾ ಚಿನ್ನದ ಆಭರಣಗಳನ್ನು ತರಲು ಒತ್ತಾಯಿಸುತ್ತಿದ್ದಾರೆಂದು ಹೇಳಿಕೊಂಡಳೆಂದೂ ಸ್ಪಷ್ಟವಾಗಿ ತಿಳಿಸಿರುತ್ತಾಳೆ. ಅಲ್ಲದೆ, ಪ್ರಾ.ಸಾ.1 ಸಣ್ಣ ಪುಟ್ಟ ವಿಷಯಗಳನ್ನು ದೊಡ್ಡದು ಮಾಡಿ ಪ್ರತೀ ದಿನ ತನ್ನೊಂದಿಗೆ ಜಗಳ ಮಾಡಿ, ಹೊಡೆಯುತ್ತಾರೆಂದು ತಿಳಿಸಿದ್ದಳೆಂದೂ ಹೇಳಿರುತ್ತಾಳೆ. ***ಸುರೀಂದರ್ ಸಿಂಗ್ –ವಿರುದ್ಧ – ಹರಿಯಾಣ ಸರ್ಕಾರ*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಕ್ರೌರ್ಯಕ್ಕೆ ಕಾರಣವಾಗಿರುವಂಥವರು ಒಂದೇ ಮನೆಯವರಾಗಿರುವಾಗ, ಸಾಕ್ಷ್ಯವನ್ನು ಪಡೆಯುವುದು ಕಷ್ಟಸಾಧ್ಯವಾದುದೆಂದೂ ಅಭಿಪ್ರಾಯಪಟ್ಟು, ಮನೆ ಕೆಲಸದವರು ಅವರ ಋಣದಲ್ಲೇ ಇರುತ್ತಾರಾದುದರಿಂದ ಅವರುಗಳೂ ಸಹ ಅವರ ವಿರುದ್ಧ ಸಾಕ್ಷ್ಯ ನೀಡುವುದಿಲ್ಲ. ಹಾಗಾಗಿ ಮೃತರ ತಂದೆ – ತಾಯಿಯವರು ಹಾಗೂ ಸಂಬಂಧಿಕರಲ್ಲದೆ, ಅವರ ಪರವಾಗಿ ಮತ್ಯಾರು ಸಾಕ್ಷ್ಯ ನೀಡುತ್ತಾರೆಂದು ಅಭಿಪ್ರಾಯ ಪಟ್ಟಿರುತ್ತದೆ. ಮೇಲಿನ ಸಾಲುಗಳನ್ನು ಆಧರಿಸಿ, ಈ ನ್ಯಾಯಾಲಯವು, ಪ್ರಾ.ಸಾ.1 ರವರ ಮಾತುಗಳು ನಂಬಲರ್ಹವಾದವುಗಳೆಂದು ಪರಿಗಣಿಸಿ, ಮದುವೆಯಾದ ನಂತರವೂ ವರದಕ್ಷಿಣೆ ತರುವಂತೆ ಹೇಳಿರುವುದು ಕಾನೂನುಬಾಹಿರವಾದುದಾಗಿರುತ್ತದೆ. ಆಪಾದಿತ ಸಂಖ್ಯೆ.3 ಹೇಳಿದಂತೆ ವರದಕ್ಷಿಣೆ ತರದೆ ಇದ್ದುದರಿಂದ ಕಿರುಕುಳ ನೀಡಿ ಮೃತಳು ಬಲಿಯಾಗಿರುತ್ತಾಳೆ. ಹಾಗಾಗಿ, ಈ ನ್ಯಾಯಾಲಯವು, ವರದಕ್ಷಿಣೆ ತರುವಂತೆ ಮಾಡುತ್ತಿದ್ದ ಒತ್ತಾಯವು ಮೃತಳಿಗೆ ಕಿರುಕುಳವನ್ನು ನೀಡಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.

ಆಪಾದಿತ ಸಂಖ್ಯೆ.3 ಹೆಚ್ಚಿನ ಹಣಕ್ಕಾಗಿ ಒತ್ತಾಯ ಪಡಿಸುತ್ತಿದ್ದದ್ದು ರುಜುವಾತಾಗಿರುವುದರಿಂದ, ಮೃತಳು ತನ್ನ ಮರಣ ಕಾಲೀನ ಹೇಳಿಕೆ (ನಿಶಾನೆ.ಪಿ.6)

ಯಲ್ಲಿನ ಮೃತಳ ಮಾತುಗಳನ್ನು ಪುನರುಚ್ಚರಿಸಿ, ಈಕೆ ತನ್ನ ಅತ್ತೆ, ಆಪಾದಿತ ಸಂಖ್ಯೆ.1ರ ಕ್ರೌರ್ಯಕ್ಕೆ ಬಲಿಯಾಗಿರುತ್ತಾಳೆಂದು ಅಭಿಪ್ರಾಯಪಡಲಾಗಿರುತ್ತದೆ.

ಅಪೀಲುದಾರರು ಹಾಜರುಪಡಿಸಿದಂಥ ***ಭಾಗೀರಥಿ –ವಿರುದ್ಧ– ಮಧ್ಯಪ್ರದೇಶ ಸರ್ಕಾರ*** [6], ಪ್ರಕರಣದ ತೀರ್ಪಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> *"15. ಪ್ರಾಸಿಕ್ಯೂಷನ್ ತಾನು ಆಪಾದಿಸಿದಂತೆ ಪ್ರಕರಣವನ್ನು ಸಾರಭೂತವಾಗಿ ರುಜುವಾತುಪಡಿಸುವ ಮೂಲಕ ಅದು ಯಶಸ್ಸನ್ನು ಪಡೆಯಬಹುದೆಂಬುದು ಇತ್ಯರ್ಥಗೊಂಡಿರುತ್ತದೆ. ಇದು ಸಂಪೂರ್ಣವಾಗಿ ತನ್ನನ್ನೆ ಅವಲಂಬಿಸಿರುತ್ತದೆ. ಇದು ಪ್ರತಿವಾದ ಕೊರತೆಯ ಲಾಭಪಡೆಯುವಂತಿಲ್ಲ ಅಥವಾ ನ್ಯಾಯಾಲಯವು ಸ್ವತಃ ಪ್ರಾಸಿಕ್ಯೂಷನ್ ಪರ ಹೊಸ ವಾದವನ್ನು ರೂಪಿಸಬಹುದಾಗಿರುತ್ತದೆ ಮತ್ತು ಆ ಆಧಾರದ ಮೇಲೆಯೇ ಆಪಾದಿತನನ್ನು ಅಪರಾಧಿಯೆಂದು ನಿರ್ಣೀತಗೊಳಿಸಲಾಗುತ್ತದೆ".*

ಈ ಪ್ರಕರಣದಲ್ಲಿ, ಪ್ರಾಸಿಕ್ಯೂಷನ್, ಆಪಾದಿತ ಸಂಖ್ಯೆ.3 ವರದಕ್ಷಿಣೆಗಾಗಿ ಒತ್ತಾಯಿಸಿರುತ್ತಾಳೆಂಬುದನ್ನು ಮೃತಳ ಕುಟುಂಬದ ಸಾಕ್ಷ್ಯದ ಮೂಲಕ ಹಾಗೂ ಮರಣಕಾಲೀನ ಘೋಷಣೆಯ ಮೂಲಕ, ಮೌಖಿಕ ದೂರು ಹಾಗೂ ಗಾಯದ ಪ್ರಮಾಣಪತ್ರದ ಮೂಲಕ ರುಜುವಾತುಪಡಿಸಿದ್ದು, ಆಪಾದಿತ ಸಂಖ್ಯೆ.3ರ ಒತ್ತಾಯವನ್ನು ಪಾಲಿಸದೆ ಮೃತಳನ್ನು ಕಿರುಕುಳಕ್ಕೆ ಒಳಪಡಿಸಿದ್ದು, ಇದು ಭಾರತೀಯ ದಂಡ ಸಂಹಿತೆಯ 498–ಎ ಪ್ರಕರಣದಡಿಯಲ್ಲಿನ ಕ್ರೌರ್ಯಕ್ಕೆ ಕಾರಣವಾಗುತ್ತದೆ.

6. (1976)1 ಎಸ್‌ಸಿಸಿ 20

ಮುಂದುವರೆದು, ಸರ್ವೋಚ್ಚ ನ್ಯಾಯಾಲಯವು ***ಭಾಗೀರಥಿ –ವಿರುದ್ಧ– ಮಧ್ಯಪ್ರದೇಶ ಸರ್ಕಾರ*** ಪ್ರಕರಣದಲ್ಲಿ, ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> *"18. ಪ್ರತ್ಯಕ್ಷ ಸಾಕ್ಷಿಯು ನೀಡಿದ ಸಾಕ್ಷ್ಯವು ಪ್ರಾಸಿಕ್ಯೂಷನ್ ಪರಿಶೀಲನೆಯಿಂದ ಸುಳ್ಳೆಂದು ಕಂಡುಬಂದಾಗ, ಎಲ್ಲಾ ಆಪಾದಿತರ ವಿರುದ್ಧ ಒಟ್ಟಾರೆ ಸಮಗ್ರವಾಗಿ ಪ್ರಾಸಿಕ್ಯೂಷನ್ ಪ್ರಕರಣವನ್ನು ದಾಖಲಿಸುವುದು ಮಾತ್ರವೇ ವಿವೇಕಯುತ ವಾದ ನಡೆಯುತ್ತಿರುತ್ತದೆ. ಮೇಲಿನ ತೀರ್ಪಿನಲ್ಲಿ ಪ್ರಕರಣದ ವಿವಾದಾಂಶಗಳಲ್ಲಿ, ಪ್ರಾಸಿಕ್ಯೂಷನ್ ಸಾಕ್ಷ್ಯಗಳ ಸಾಕ್ಷಿಗಳು ಆರೋಪಗಳನ್ನು ರುಜುವಾತುಪಡಿಸದಿರುವುದರಿಂದ ಹಾಗೂ ಸುಳ್ಳು ಹಾಗೂ ತಪ್ಪೆಂದು ಕಂಡು ಬಂದಿರುವುದರಿಂದ, ನ್ಯಾಯಾಲಯವು ಮೇಲಿನ ಅಭಿಪ್ರಾಯವನ್ನು ತಳೆದಿರುತ್ತದೆ.*

7. ಮೇಲಿನ ಕಾರಣಗಳ ಹಿನ್ನೆಲೆಯಲ್ಲಿ, ನ್ಯಾಯಾಲಯವು ಆಪಾದಿತ ಸಂಖ್ಯೆ.3 ಭಾರತೀಯ ದಂಡ ಸಂಹಿತೆಯ 498–ಎ ಪ್ರಕರಣದಡಿಯಲ್ಲಿನ ಕ್ರೌರ್ಯದ ಅಪರಾಧದ ದೋಷಿಯೆಂದು ತೀರ್ಮಾನಿಸಿರುತ್ತದೆ. ಆದಾಗ್ಯೂ, ಕ್ರೌರ್ಯ ಅಥವಾ ಕಿರುಕುಳದ ಪ್ರಮಾಣವು, ಗರಿಷ್ಠ ದಂಡನೆಯನ್ನು ನೀಡುವಂಥ ದುರಾಚಾರದ ಪ್ರಮಾಣವನ್ನು ರುಜುವಾತುಪಡಿಸಿರುವುದಿಲ್ಲವಾದ್ದರಿಂದ, ಆಪಾದಿತ ಸಂಖ್ಯೆ.3ನ್ನು 3 ತಿಂಗಳುಗಳ ಅವಧಿಯ ಕಠಿಣ ಕಾರಾವಾಸ ಹಾಗೂ 10,000/–ರೂ.ಗಳ ಜುಲ್ಮಾನೆಯ ಸಂದಾಯದ ಶಿಕ್ಷೆಗೆ ಗುರಿಪಡಿಸಬೇಕು. ದಂಡ ಕಟ್ಟಲು ತಪ್ಪಿದಲ್ಲಿ ಒಂದು ತಿಂಗಳ ಅವಧಿಯ ಸಾದಾ ಕಾರಾವಾಸ ಶಿಕ್ಷೆಗೆ ಗುರಿಪಡಿಸಬೇಕು.

ಈ ಅಪೀಲನ್ನು ಭಾಗಶಃ ಅಂಗೀಕರಿಸಲಾಗಿರುತ್ತದೆ.

---